# ಹಸಿರು ಮನೆ ಮತ್ತು ನೆರಳು ಪರದೆ ಕಾರ್ಯಕ್ರಮ

## ಮಾರ್ಗಸೂಚಿ

### I. ಕಾರ್ಯಕ್ರಮ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು:

ಹಸಿರು ಮನೆ ಮತ್ತು ನೆರಳು ಪರದೆ ಘಟಕದ ಒಟ್ಟು ವೆಚ್ಚ & ಸಹಾಯಧನದ ವಿವರಗಳು.

| ಕ್ರ. ಸಂ | ಕಾಯರ್ಯಕ್ರಮ | ಘಟಕದ ವೆಚ್ಚ ಪ್ರತಿ ಚ.ಮೀ.ಗೆ (ರೂ) | ಶೇ. ಸಹಾಯಧನ | ಸಹಾಯಧನದ ಮೊತ್ತ ಪ್ರತಿ ಚ.ಮೀ | ಗರಿಷ್ಠ ವಿಸ್ತೀರ್ಣ (ಚ.ಮೀ) |
|---|---|---|---|---|---|
| 1 | ಹಸಿರು ಮನೆ (Fan & Pad) | 1650.00 (1 ರಿಂದ 500 ಚ.ಮೀ ರವರಗೆ) | 50% | 825.00 | 4000 |
| | | 1465.00 (500 ರಿಂದ 1000 ಚ.ಮೀ ರವರಗೆ) | | 732.50 | |
| | | 1420.00 (1000 ರಿಂದ 2000 ಚ.ಮೀ ರವರಗೆ) | | 710.00 | |
| | | 1400.00 (2000 ರಿಂದ 4000 ಚ.ಮೀ ರವರಗೆ) | | 700.00 | |
| 2 | ಹಸಿರು ಮನೆ Tubular structure | 1060.00 (1 ರಿಂದ 500 ಚ.ಮೀ ರವರಗೆ) | 50% | 530.00 | 4000 |
| | | 935.00 (500 ರಿಂದ 1000 ಚ.ಮೀ ರವರಗೆ) | | 467.50 | |
| | | 890.00 (1000 ರಿಂದ 2000 ಚ.ಮೀ ರವರಗೆ) | | 445.00 | |
| | | 844.00 (2000 ರಿಂದ 4000 ಚ.ಮೀ ರವರಗೆ) | | 422.00 | |
| 3 | ಹಸಿರು ಮನೆ Wooden/Granite Structure | 540.00 | 50% | 270.00 | 4000<br>50% of the cost limited to 20 units, each unit should not exceed 200 Sq mt per beneficiary |
| 4 | ಹಸಿರು ಮನೆ Bamboo Structure | 450.00 | 50% | 225.00 | 4000<br>50% of the cost limited to 20 units, each unit should not exceed 200 Sq mt per beneficiary |

| | | | | | |
|---|---|---|---|---|---|
| 5 | ನೆರಳು ಪರದೆ ಮನೆ Tubular structure | 710.00 | 50% | 355.00 | 4000 |
| 6 | ನೆರಳು ಪರದೆ ಮನೆ Wooden/Granite Structure | 492.00 | 50% | 246.00 | 4000<br>50% of the cost limited to 20 units, (each unit not to exceed 200 Sq mt) per beneficiary |
| 7 | ನೆರಳು ಪರದೆ ಮನೆ Bamboo Structure | 360.00 | 50% | 180.00 | 4000<br>50% of the cost limited to 20 units, (each unit not to exceed 200 Sq mt) per beneficiary |

* Drip/sprinkler irrigation system ಅಳವಡಿಸುವುದು ಕಡ್ಡಾಯವಾಗಿರುತ್ತದೆ. ಇಲ್ಲದಿದ್ದಲ್ಲಿ ಪ್ರಸ್ತಾವನೆಯನ್ನು ಸಹಾಯಧನ ನೀಡಲು ಪರಿಗಣಿಸುವಂತಿಲ್ಲ.

* 1000 ಚ.ಮೀ. ವಿಸ್ತೀರ್ಣ ಮೇಲ್ಪಟ್ಟ ಪ್ರಸ್ತಾವನೆಗಳಿಗೆ ಕಾರ್ಯಾದೇಶ ಪ್ರಸ್ತುತ ಸಾಲಿನಲ್ಲಿ ಬ್ಯಾಂಕ್ ಸಾಲ ಪಡೆದಿರಬೇಕು. ಬ್ಯಾಂಕ್ ಸಾಲ ಪಡೆಯುವುದು ಕಡ್ಡಾಯವಾಗಿರುತ್ತದೆ. ಹಳೆಯ ಬ್ಯಾಂಕ್ ಸಾಲಗಳನ್ನು ಮಾನ್ಯತೆ ಮಾಡುವುದಿಲ್ಲ.

## II. ಕಾರ್ಯಕ್ರಮ ಉದ್ದೇಶಗಳು:-

1. ಉತ್ತಮ ಗುಣಮಟ್ಟದ ತೋಟಗಾರಿಕೆ ಬೆಳೆಗಳ ಉತ್ಪನ್ನಗಳನ್ನು ಉತ್ಪಾದಿಸಲು ರೋಗ/ಕೀಟ ಬಾಧೆಯನ್ನು ನಿಯಂತ್ರಿಸುವುದು.
2. ಉತ್ಪಾದಕತೆ ಹೆಚ್ಚಿಸಲು ಹಾಗೂ ಉತ್ತಮ ಗುಣಮಟ್ಟದ ತೋಟಗಾರಿಕೆ ಉತ್ಪನ್ನಗಳನ್ನು ಉತ್ಪಾದಿಸಲು ವಿವಿಧ ಪುಷ್ಪ/ಹಣ್ಣಿನ/ ತರಕಾರಿ ಹಾಗೂ ಇತರೆ ಅಧಿಕ ಮೌಲ್ಯದ ತೋಟಗಾರಿಕಾ ಬೆಳೆಗಳನ್ನು ಸಂರಕ್ಷಿತ ವಾತಾವರಣದಲ್ಲಿ ಬೆಳೆಸುವುದು.
3. ಎಲ್ಲಾ ರೀತಿಯ ತೋಟಗಾರಿಕೆ ಬೆಳಗಳನ್ನು ವರ್ಷದ ಎಲ್ಲಾ ಋತಮಾನಗಳಲ್ಲಿ ಬೆಳೆಸುವುದು.
4. ಉತ್ಪನ್ನಗಳ ಸ್ಥಳೀಯ ಮಾರುಕಟ್ಟೆ ಹಾಗೂ ರಫ್ತು ಮಾರುಕಟ್ಟೆ ಗುಣಮಟ್ಟವನ್ನು ಕಾಪಾಡುವುದು.

## III.ಅನುದಾನ ಮತ್ತು ಸಹಾಯಧನ :-

2014-15 ನೇ ಸಾಲಿನ MIDH ಯೋಜನೆಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪಯೋಜನೆಯಡಿ ಸಂರಕ್ಷಿತ ಬೇಸಾಯ ಕಾರ್ಯಕ್ರಮಕ್ಕಾಗಿ **ಭೌತಿಕ 2075.08 ಹೆ. ಆರ್ಥಿಕ ರೂ. 4044.90 ಲಕ್ಷಗಳ** ಕ್ರಿಯಾಯೋಜನೆಗೆ ಅನುಮೋದನೆಗೆ ಸಲ್ಲಿಸಲಾಗಿರುತ್ತದೆ.

- ಹಸಿರು ಮನೆ ಘಟಕಗಳು (Poly Houses): **ಭೌತಿಕ 46.63 ಹೆ. ಆರ್ಥಿಕ ರೂ. 2463.09 ಲಕ್ಷಗಳು**
- ನೆರಳು ಪರದೆ ಮನೆ ಘಟಕಗಳು (Shade net House): **ಭೌತಿಕ 28.00 ಹೆ. ಆರ್ಥಿಕ ರೂ. 943.80 ಲಕ್ಷಗಳು**

## IV. ತಾಂತ್ರಿಕ ವೈಶಿಷ್ಟತೆಗಳು:-

- NEED FOR FIRMING UP TECHNICAL STANDARDS OF GREEN HOUSE :- Depending upon various factors viz. location, crop, size, requirement etc, variable specifications of various components involved in construction of Green House / Net House are being used.
- **A large number of such Green Houses / Net Houses have come up with heavy subsidies from Government, both Central and State including NHB, and loans from Financial Institutions.**
- **There are numerous cases of failure of Poly House / Net House Structures due to use of sub-standard material or non-compliance of Minimum Technical requirement needed for setting up such structure resulting into heavy loss to the beneficiary and also defeating the purpose of providing assistance.**
- **ಹಸಿರು ಮನೆ (Naturally Ventilated Tubular Structure) ಮತ್ತು ನೆರಳು ಪರದೆ (Tubular Structure) ಘಟಕಗಳ ನಿರ್ಮಾಣವು ಅನುಬಂಧಿಸಿರುವ ತಾಂತ್ರಿಕ ವಿನ್ಯಾಸ (Detailed Technical Standard) ಪ್ರಕಾರವೇ ನಿರ್ಮಾಣ ಮಾಡುವುದು ಕಡ್ಡಾಯವಾಗಿರುತ್ತದೆ. (Item wise Technical Standards) ವಿನ್ಯಾಸಗಳ ವಿವರಗಳನ್ನು ಅನುಬಂಧಿಸಿದೆ.**
- **Green House ಘಟಕದ ಪ್ರವೇಶ ದ್ವಾರ ಕಡ್ಡಾಯವಾಗಿ Double Door Structure ಹೊಂದಿರಬೇಕು.**

## V. ಫಲಾನುಭವಿಗಳ ಅರ್ಹತೆ:-

1) ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು.
2) ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. (Notary ರವರಿಂದ ದೃಢೀಕರಣ ಮಾಡಿಸಬೇಕು)
3) ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಮರಣ ಪತ್ರ - ಸಕ್ಷಮ ಪ್ರಾಧಿಕಾರದಿಂದ, ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ,ಕುಟಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.
4) ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
5) ಫಲಾನುಭವಿಗಳು ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು ಅಥವಾ ತೋಟಗಾರಿಕೆ ಬೆಳೆ ಬೆಳೆಯುವ ಆಸಕ್ತಿ ಹೊಂದಿರಬೇಕು.

6) ಎಲ್ಲಾ ವರ್ಗದ ಫಲಾನುಭವಿಗಳು ಅಂದರೆ ಸಾಮಾನ್ಯ,ಪರಿಶಿಷ್ಟ ಜಾತಿ , ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು /ಸಣ್ಣ ಹಾಗೂ ಅತೀ ಸಣ್ಣ ರೈತರು ಹಾಗೂ ರೈತ ಮಹಿಳೆಯರು ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ.

## VI. ಅರ್ಜಿಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಆಯ್ಕೆ:-

1) ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗಧಿ ಪಡಿಸಿರುವ ಗುರಿಯ ಮಿತಿಯಲ್ಲಿ ಸ್ಥಳಿಯ ಪತ್ರಿಕೆಗಳು, ಇತರೆ ಮಾಧ್ಯಮಗಳ ಮುಖಾಂತರವಾಗಿ ಹಾಗೂ ಜಿಲ್ಲೆಯ ತಾಲ್ಲೂಕಿನ ಕಛೇರಿ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಅಹ್ವಾನಿಸುವುದು. ಈ ಬಗ್ಗೆ ಎಲ್ಲಾ ಮಾಧ್ಯಮಗಳನ್ನು ಬಳಸಿಕೊಂಡು ಪ್ರಚಾರ ನೀಡತಕ್ಕದ್ದು.
2) ಪ್ರಕಟಣೆಯಲ್ಲಿ ಕಡ್ಡಾಯವಾಗಿ ಫಲಾನುಭವಿಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಜಿಲ್ಲೆಗೆ ನಿಗಧಿಪಡಿಸಿದ ಗುರಿ ಮತ್ತು ನಿಗಧಿಪಡಿಸಿದ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕರಿಸಿದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟವಾಗಿ ಮಾಹಿತಿ ಇರತಕ್ಕದ್ದು. ಒಂದು ವೇಳೆ ನಿಗಧಿಪಡಿಸಿರುವ ಗುರಿಗಳಿಗಿಂತ ಹೆಚ್ಚುವರಿ ಅರ್ಜಿ ಬಂದಲ್ಲಿ ಅಂತಹ ರೈತರಿಗೆ ಅನುದಾನ ಉಳಿಕೆಯಾದಲ್ಲಿ ಮಾತ್ರ ಅವರ ಅರ್ಜಿಯನ್ನು ಪರಿಗಣಿಸುವ ಬಗ್ಗೆ ಲಿಖಿತವಾಗಿ ತಿಳಿಸತಕ್ಕದ್ದು.
3) ಆಸಕ್ತಿಯುಳ್ಳ ರೈತರು ಅರ್ಜಿಯನ್ನು ಮೊದಲಿಗೆ ಈ ಕೆಳಕಂಡ ದಾಖಲಾತಿಗಳೊಂದಿಗೆ ತಾಲ್ಲೂಕು ಹಿಸತೋನಿ/ಸತೋನಿ ಕಛೇರಿಗೆ ಸಲ್ಲಿಸುವುದು.
    a. ನಿಗಧಿತ ನಮೂನೆಯಲ್ಲಿ ಫಲಾನುಭವಿಯ ಭಾವಚಿತ್ರ ಹಾಗೂ ಫಲಾನುಭವಿ ಭರ್ತಿ ಮಾಡಿ ಸಹಿ ಮಾಡಿದ ಅರ್ಜಿ.
    b. ದಿನಾಂಕ: ಜನವರಿ 2014ರ ನಂತರದ ಪಹಣಿ (RTC) (ಅಳವಡಿಸಿದ ಬೆಳೆ ಮತ್ತು ವಿಸ್ತೀರ್ಣ ನಮೂದಿಸಿರಬೇಕು). ಯನ್ನು ಪಡೆದಿರಬೇಕು.ಹಳೆಯ ಪಹಣಿಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.
4) ಅರ್ಜಿಯನ್ನು ಪರಿಶೀಲಿಸಿದ ನಂತರ ಸಹಾಯಧನ ಪಡೆಯಲು ಅರ್ಹ ವಿದ್ದಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳ ಶಿಫಾರಸ್ಸಿನೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು.
5) ಒಂದು ವೇಳೆ ಫಲಾನುಭವಿ ಸಹಾಯಧನ ಪಡೆಯಲು ಅರ್ಹ ಇಲ್ಲದೆ ಹೋದಲ್ಲಿ ಅರ್ಜಿ ಸ್ವೀಕರಿಸಿದ 1 ವಾರದ ಒಳಗಾಗಿ ಯಾವ ಕಾರಣಕ್ಕೆ ಅವರ ಅರ್ಜಿ ಪರಿಗಣಿಸಿಲು ಸಾಧ್ಯವಿಲ್ಲವೆಂದು ಹಿಂಬರಹ ನೀಡಿ ಕೂಡಲೇ ಹಿಂತರುಗಿಸತಕ್ಕದ್ದು.
6) ಜಿಲ್ಲೆಗೆ ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ಪಾಲಿಸಿಕೊಂಡು ಜಿಲ್ಲಾ ಸಮಿತಿಯ ಗಮನಕ್ಕೆ ತಂದು ಅಥವಾ ಅನುಮತಿ ಪಡೆದು ಕೊಂಡು **ತೋಟಗಾರಿಕೆ ಉಪನಿರ್ದೇಶಕರು** ರೈತ ಫಲಾನುಭವಿಗೆ ಹಸಿರು ಮನೆ ಅಥವಾ ನೆರಳು ಪರದೆ ನಿರ್ಮಿಸಲು ಲಿಖಿತವಾಗಿ (ಕಾಮಗಾರಿ ಮುಗಿಸಲು ಕನಿಷ್ಠ 30 ರಿಂದ ಗರಿಷ್ಠ

45 ದಿನಗಳ ಅವಧಿ ನೀಡುವುದು. 45 ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸದಿದ್ದಲ್ಲಿ ಲಿಖಿತ ಅನುಮತಿ ತನ್ನಿಂದ ತಾನೇ ರದ್ದಾಗುತ್ತದೆ ಎಂದು ತಿಳಿಸಿ) ಅನುಮತಿ ಪತ್ರ ನೀಡುವುದು.

7) ಪಾಲಿಮನೆ/ನೆರಳು ಪರದೆ ಮನೆಗೆ ಬಳಸುವ ವಸ್ತುಗಳ Technical specification - structural details of Poly house/Shade net house ವಿವರಗಳು (Annexure-1A/1B) ಕಡ್ಡಾಯವಾಗಿ ರೈತ ಫಲಾನುಭವಿಗೆ ಅನುಮತಿ ಪತ್ರದೊಂದಿಗೆ ನೀಡಬೇಕು.
   - ಹಸಿರು ಮನೆ Wooden/Granite/Bamboo ಮತ್ತು ನೆರಳು ಪರದೆ ಮನೆ Wooden/Granite/Bamboo ಘಟಕಗಳ Annexure-1A/1B ಸ್ಥಳ ಪರೀಶೀಲಾನ ದೃಢೀಕರಣ ಪತ್ರದಲ್ಲಿ **ಘಟಕದ ಒಟ್ಟು ವಿಸ್ತೀರ್ಣ: ಮತ್ತು ಘಟಕಗಳ ಸಂಖ್ಯೆಯನ್ನು ನಮೂದಿಸಿರುವುದು** ಕಡ್ಡಾಯವಾಗಿರುತ್ತದೆ.

8) **ಫಲಾನುಭವಿಯು NHB ಅಥವಾ ಇಲಾಖೆಯ CHD/RKVY ಯೋಜನೆಯಡಿಯಲ್ಲಿ ಸಹಾಯಧನ ಪಡೆದಿಲ್ಲವೆಂಬುದರ ಬಗ್ಗೆ ತೋಉನಿ ರವರು ಪರಿಶೀಲಿಸಿ ಕಾರ್ಯಾದೇಶ ನೀಡುವುದು.**

ತೋಟಗಾರಿಕಾ ಉಪ ನಿರ್ದೇಶಕರಿಂದ ಹಸಿರುಮನೆ/ನೆರಳುಮನೆ ನಿರ್ಮಿಸಲು ಅನುಮತಿ ನೀಡಿದ ಕೂಡಲೇ ತಾಲ್ಲೂಕಿನ ಹಿ.ಸ.ತೋ.ನಿ./ಸ.ತೋ.ನಿ. ಹಾಗೂ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕಾ ಅಧಿಕಾರಿಯು ರೈತ ಫಲಾನುಭವಿಯೊಂದಿಗೆ ಉದ್ದೇಶಿತ ಸ್ಥಳದ ಸೂಕ್ತತೆ ಬಗ್ಗೆ ಸ್ಥಳ ಪರಿಶೀಲಿಸಬೇಕು ಮತ್ತು ಛಾಯಾಚಿತ್ರ ಪಡೆಯಬೇಕು.

**9)** ತೋಉನಿ (ಜಿಪಂ) ರವರಿಂದ work order/letter of intent ಪಡೆದ ನಂತರ ರೈತರು ಸದರಿ ಯೋಜನೆಯ ಅನುಸಾರ 45 ದಿನಗಳೊಳಗಾಗಿ ತಮ್ಮ ಕ್ಷೇತ್ರದಲ್ಲಿ ನಿರ್ಮಾಣವನ್ನು ಪೂರ್ಣಗೊಳಿಸಬೇಕು.

**10) ಹಸಿರು ಮನೆ/ ನೆರಳು ಪರದೆ ಪರಿಶೀಲನಾ ಪಟ್ಟಿ**

1. ಫಲಾನುಭವಿಯು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು.
2. ಫಲಾನುಭವಿ ಹೆಸರಿನಲ್ಲಿರುವ ಪ್ರಸಕ್ತ ಸಾಲಿನ ಪಹಣಿ ಲಗತ್ತಿಸಿರಬೇಕು (ಜನವರಿ-2014 ರ ನಂತರದ RTC).
3. ಫಲಾನುಭವಿಯು ಜಂಟಿ ಖಾತೆ ಹೊಂದಿದಲ್ಲಿ ಕುಟುಂಬದವರ ಒಪ್ಪಿಗೆ ಪತ್ರ / ಜಂಟಿ ಖಾತೆ ಹೊಂದಿರುವ ಇತರೆ ರೈತರು NOC ನೀಡಿರಬೇಕು ನೋಟರಿ ಕಡ್ಡಾಯವಾಗಿರುತ್ತದೆ.
5. Detailed Project Report (DPR) ಲಗತ್ತಿಸಿರಬೇಕು.
6. ಘಟಕದ ನಕ್ಷೆ/ Blue Print ಲಗತ್ತಿಸಿರುರಬೇಕು.
7. ಘಟಕದ ನಿರ್ಮಾಣಕ್ಕೆ ತಗಲಿರುವ ಐಟಂವಾರು ವೆಚ್ಚದ TIN ಹೊಂದಿರುವ ನಗದು ಬಿಲ್ಲುಗಳನ್ನು ಲಗತ್ತಿಸಿರಬೇಕು.
8. ಘಟಕ ಸದುಪಯೋಗಪಡಿಸಿಕೊಳ್ಳುವ ಬಗ್ಗೆ ಪ್ರಮಾಣ ಪತ್ರ / ಮುಚ್ಚಳಿಕೆ ಪತ್ರ ನೀಡಿರಬೇಕು.
9. ಫಲಾನುಭವಿಯು ಈ ಘಟಕದ ನಿರ್ಮಾಣಕ್ಕಾಗಿ ಬ್ಯಾಂಕಿನಿಂದ ಸಾಲ ಪಡೆದಿದ್ದಲ್ಲಿ ಸಾಲ ಮಂಜೂರಾದ ದಿನಾಂಕ, ಮೊತ್ತ, ಬ್ಯಾಂಕ್ ಸಾಲದ ಖಾತೆಯ ಸಂಖ್ಯೆ ಹಾಗೂ Bank Appraisal ವಿವರ ಲಗತ್ತಿಸಿರಬೇಕು.
10. ಅಗತ್ಯ ದಾಖಲಾತಿಗಳನ್ನು ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರಿಗೆ ಸಲ್ಲಿಸುವುದು. ಸಂಬಂಧಿಸಿದ ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು

ಫಲಾನುಭವಿಯೊಂದಿಗೆ ತಾಕುಗಳನ್ನು ಪರಿಶೀಲಿಸಿ ಯೋಜನೆಯ ಅನುಷ್ಠಾನದ ಗುಣಮಟ್ಟ ಹಾಗೂ ಸದರಿ ಘಟಕದಲ್ಲಿ ಅಳವಡಿಸಿರುವ ಪರಿಕರಗಳ ಪ್ರಮಾಣ ಕುರಿತಂತೆ ತೃಪ್ತಿಕರವಾಗಿದ್ದಲ್ಲಿ, ಕಾಮಗಾರಿ ಪ್ರಾರಂಭಿಸುವ ಮುನ್ನ, ಕಾಮಗಾರಿ ಪ್ರಾರಂಭವಾದ ನಂತರ gable ಹಂತ / errection ಹಂತದ, Polythene/ net ಹಾಗೂ Drip/sprinkler ಅಳವಡಿಸಿದ ನಂತರ ಒಳಭಾಗ ಮತ್ತು ಹೊರಭಾಗದ ನಾಲ್ಕು ದಿಕ್ಕಿಗಳಿಂದ ಪಾಲಿಮನೆ/ನೆರಳು ಪರದೆ ಮನೆ ಸಂಪೂರ್ಣವಾಗಿ ಕಾಣುವಂತೆ ಅಧಿಕಾರಿ ಹಾಗೂ ಫಲಾನುಭವಿಗಳ ಸಮೇತ ಫೋಟೊ ತೆಗೆಯುವುದು.

11. ಫೋಟೊ ಹಾಗೂ ವರಧಿಯನ್ನು ಸತೋಅ (RSK) ಹಾಗೂ ಹಿಸತೋನಿ ದೃಢೀಕರಣದೊಂದಿಗೆ ರೈತರು ಸಲ್ಲಿಸುವ ಪ್ರತಿಯೊಂದು ಸಹಾಯಧನ ಅರ್ಜಿ ಮತ್ತು ದಾಖಲಾತಿಗಳನ್ನು ನಿಗದಿತ ದಿನಾಂಕದೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರಿಗೆ ಸಲ್ಲಿಸುವುದು.

**ಪ್ರತಿ ಅರ್ಜಿಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಕಡ್ಡಾಯವಾಗಿ ಶೇ.100 ರಷ್ಟು ತಾಕು ಪರಿಶೀಲನೆ ನಡೆಸಬೇಕು.**

**ಸತೋಅ (RSK) ರವರು ಪರಿಶೀಲಿಸಿದ ತಾಕುಗಳ ಪೈಕಿ ಕನಿಷ್ಟ ಶೇ.50% ರಷ್ಟು ತಾಕುಗಳನ್ನು ತಾಲ್ಲೂಕು ಸತೋನಿ/ಹಿಸತೋನಿ ರವರು ಪರಿಶೀಲಿಸಬೇಕು.ಸತೋಅ (RSK) ರವರು ನಡೆಸಿರುವ ಪರಿಶೀಲನೆಯಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಅರ್ಜಿಯನ್ನು ತಿರಸ್ಕರಿಸುವುದಲ್ಲದೇ ಅವರನ್ನೇ ನೇರ ಜವಾಬ್ದಾರರನ್ನಾಗಿ ಮಾಡುವುದು.**

**ಜಿಲ್ಲೆಯ ತೋಉನಿ (ಜಿಪಂ) ರವರು ಶೇ.5% ರಷ್ಟು ತಾಕುಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು.**

**ಸತೋನಿ/ಹಿಸತೋನಿ ರವರು ಪರಿಶೀಲಿಸಿರುವ ಅರ್ಜಿಗಳಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಸತೋನಿ/ಹಿಸತೋನಿ ರವರನ್ನು ಜವಾಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರಧಿ ಸಲ್ಲಿಸುವುದು. ಮೇಲಿನ ಎಲ್ಲಾ ಅಧಿಕಾರಿಗಳು ತಮ್ಮ ಸ್ಥಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ GPS enabled photos ಅನ್ನು ತೆಗೆದು ದಾಖಲಿಸುವುದು.**

## VII. ತಾಂತ್ರಿಕ ಪರಿಶೀಲನಾ ಕ್ರಮಗಳು :-

ತಾಕು ಪರಿಶೀಲನೆ ಸಮಯದಲ್ಲಿ ಅನುಷ್ಠನಾಧಿಕಾರಿಗಳು ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪರಿಶೀಲಿಸತಕ್ಕದ್ದು.

1. ಸ್ಥಳ ಸೂಕ್ತತೆ ಬಗ್ಗೆ ಸ್ಥಳ ಪರಿಶೀಲನಾ ಸಮಯದಲ್ಲಿ ಉದ್ದೇಶಿತ ಸ್ಥಳದ ಛಾಯಾಚಿತ್ರ ರೈತ ಫಲಾನುಭವಿ, ಇಲಾಖೆ ಅಧಿಕಾರಿಗಳು ಒಳಗೊಂಡಂತೆ ಕಡ್ಡಾಯವಾಗಿ ತೆಗೆಯತಕ್ಕದ್ದು.
2. ಉದ್ದೇಶಿತ ಪಾಲಿಹೌಸ್ ಹೊರತುಪಡಿಸಿ ಈಗಾಗಲೇ ಇಲಾಖೆಯ ಇತರೆ CHD/ RKVY ಯೋಜನೆಯಡಿಯಲ್ಲಿ ಪಾಲಿಹೌಸ್ ನಿರ್ಮಿಸಲು ಸಹಾಯಧನ ಪಡೆಯಲು ಅರ್ಜಿ ಸಲ್ಲಿಸಿದಲ್ಲಿ ಅಥವಾ ಈಗಾಗಲೇ NHB ಅಥವಾ ಸಹಾಯಧನ ಪಡೆದಿದ್ದಲ್ಲಿ ಅಂತವರಿಗೆ NHM ನಡಿ ಸಹಾಯಧನ ಮತ್ತು ಕಾರ್ಯಾದೇಶ ನೀಡಲು ಅವಕಾಶವಿರುವುದಿಲ್ಲ.
3. ರೈತ ಫಲಾನುಭವಿಯ ಜಮೀನಿನಲ್ಲಿ ಹಸಿರುಮನೆ / ನೆರಳುಪರದೆ ಮನೆ ಈಗಾಗಲೇ ನಿರ್ಮಿಸಿದ್ದಲ್ಲಿ
   - ಅವುಗಳ ವಿಸ್ತೀರ್ಣ (ಉದ್ದ X ಅಗಲ);

- ಒಟ್ಟು ಘಟಕಗಳು;
- ಬೆಳೆಯುತ್ತಿರುವ ಬೆಳೆಗಳು;
- ಯಾವ ವರ್ಷದಲ್ಲಿ ನಿರ್ಮಿಸಿಲಾಗಿದೆ;
- ಇವುಗಳಿಗೆ ಸಹಾಯಧನ ಪಡೆದಿದ್ದಾರೆಯೇ;
- ಇಲಾಖೆಯ ಅಥವಾ NHB ವತಿಯಿಂದ ಪಡೆದಿದ್ದಾರೆಯೇ;
- ಸಹಾಯಧನದ ಮೊತ್ತ;
- ಇವುಗಳ ಮಾಹಿತಿಗಳನ್ನು ಸಂಗ್ರಹಿಸಬೇಕು ಹಾಗೂ ದಾಖಲಿಸಬೇಕು;

ಹಾಲಿ ಇರುವ ಇವುಗಳ ಛಾಯಾಚಿತ್ರವನ್ನು ತೆಗೆಯಬೇಕು. ಹಾಗೂ ದಾಖಲಾತಿಗಳೊಂದಿಗೆ ಅರ್ಜಿಯನ್ನು KSHMA ಕಛೇರಿಗೆ ಒದಗಿಸಬೇಕು.

4. ಉದ್ದೇಶಿತ ಸ್ಥಳದ ಜಮೀನಿನ ಮಣ್ಣು ಪರೀಕ್ಷೆ ಹಾಗೂ ಇದಕ್ಕೆ ಬಳಸುವ ನೀರಿನ ಪರಿಶೀಲನೆ (Soil & Water analysis) ಮಾಡಿಸಲು ರೈತರಿಗೆ ಸೂಕ್ತ ಮಾಹಿತಿಯನ್ನು ಒದಗಿಸುವುದು ಹಾಗೂ ಪರೀಕ್ಷೆ ಮಾಡಿಸಲು ಪರೀಕ್ಷಾ ಕೇಂದ್ರಗಳ ಮಾಹಿತಿ ಒದಗಿಸಬೇಕಾಗಿರುತ್ತದೆ.
5. ರೈತ ಫಲಾನುಭವಿಯು ಕಾಮಗಾರಿ ಪ್ರಾರಂಭಿಸುವ ಮುನ್ನಾ Technical standards ನಂತೆ ವಿವಿಧ GI Pipes, insect proof nets, double door entry, direction of the gutter ಮತ್ತು Poly house ಬಗ್ಗೆ ರೈತರಿಗೆ, ರೈತ ಸಂಪರ್ಕ ಅಧಿಕಾರಿ/ ತಾಲ್ಲೂಕಿನ ಅಧಿಕಾರಿಗಳು ಮಾಹಿತಿಯನ್ನು ಕಾಲಕಾಲಕ್ಕೆ ರೈತ ಫಲಾನುಭವಿಗೆ ನೀಡತಕ್ಕದ್ದು.
6. ಹಸಿರು ಮನೆ /ನೆರಳು ಪರದೆ ಮನೆಯ ಒಳಗಡೆ ಹನಿ ನೀರಾವಾರಿ/ ತುಂತರ ನೀರಾವಾರಿ (Drip/Sprinkler Irrigation System) ಪದ್ಧತಿ ಅಳವಡಿಸುವುದು ಕಡ್ಡಾಯವಾಗಿರುತ್ತದೆ. ಘಟಕದ ಒಟ್ಟು ವೆಚ್ಚದಲ್ಲಿ Drip/Sprinkler Irrigation System ಹಾಗೂ ಹಸಿರು ಮನೆ/ ನರೆಳು ಪರದೆ ಘಟಕಗಳಿಗೆ ಭರಿಸಬಹುದಾದ ವೆಚ್ಚದ ವಿವರ ಮೇಲೆ ತಿಳಿಸಲಾಗಿದೆ. ಈ ಪದ್ಧತಿ ಅಳವಡಿಸದೆ ಇದ್ದಲ್ಲಿ ಸದರಿ ಘಟಕಕ್ಕೆ ಮಂಜೂರಾತಿ ನೀಡಲು ಅವಕಾಶವಿರುವುದಿಲ್ಲ. (Micro Irrigation & Fertigation in protected cultivation is compulsory& mandatary)
7. ಪೂರ್ಣ ಪ್ರಮಾಣದ ಕಾಮಗಾರಿ, Structural work ಮುಗಿದ ಕೂಡಲೇ ಸ್ಥಳಕ್ಕೆ ಭೇಟಿ ನೀಡುವುದು. ಎಲ್ಲಾ ಪರಿಕರಗಳು as per ತಾಂತ್ರಿಕವಾಗಿ ಶಿಫಾರಸ್ಸು ಮಾಡಿರುವ ಪರಿಕರಗಳನ್ನು ಬಳಸಿರುವ ಬಗ್ಗೆ ಖುದ್ದಾಗಿ ಸ್ಥಳ ಪರಿಶೀಲಿಸಿ ದೃಢೀಕರಿಸಿ ಖಾತ್ರಿ ಮಾಡಿಕೊಳ್ಳಬೇಕು.

**VIII. ನಿರ್ದೇಶನಾಲಯದ ಅನುಮೋದನೆ:-**

KSHMA ಕಛೇರಿಗೆ ಸಲ್ಲಿಸುವ ಮುನ್ನ ದಾಖಲಾತಿಗಳನ್ನು ಕಡ್ಡಾಯವಾಗಿ Check list ನಲಿರುವಂತೆ ಪರಿಶೀಲಿಸಿ ಅರ್ಹತೆ ಇದ್ದಲ್ಲಿ ಮಾತ್ರ ಛಾಯಾಚಿತ್ರದೊಂದಿಗೆ ಪ್ರತಿಯೊಂದು ದಾಖಲಾತಿಗಳನ್ನು ದೃಢೀಕರಿಸಿ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

**IX.ಸಹಾಯಧನ ವಿತರಣೆ:**

ಜಿಲ್ಲೆಯ ತೋಉನಿ(ಜಿಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ಹಿಸತೋನಿ ನೀಡಿರುವ ಘಟಕದ ಅನುಷ್ಠಾನದ ವರದಿಯನ್ನು ಪರಿಶೀಲಿಸಿದ ನಂತರ ಕೆಲಸವು ತೃಪ್ತಿಕರವಾಗಿದಲ್ಲಿ ಮಾತ್ರ ಸಹಾಯಧನ ಮೊತ್ತವನ್ನು ಈ ಕೆಳಕಂಡ ಯಾವುದಾದರು ಒಂದು ವಿಧಾನದಲ್ಲಿ ಬಿಡುಗಡೆ ಮಾಡುವುದು.

1) ಘಟಕದ ಅಳವಡಿಕೆಯ ಪೂರ್ಣ ವೆಚ್ಚವನ್ನು ರೈತ ಫಲಾನುಭವಿಯು ಭರಿಸಿದ್ದಲ್ಲಿ ಸಹಾಯಧನ ಮೊತ್ತವನ್ನು ಫಲಾನುಭವಿಯ ಖಾತೆಗೆ ECS ಮೂಖಾಂತರ ಅಥವಾ ECS ಸೌಲಭ್ಯ ವಿಲ್ಲದಿದ್ದಲ್ಲಿ ಅಂತಹ ಬ್ಯಾಂಕ್‌ನ ಮ್ಯಾನೇಜರ್ ಹೆಸರಿಗೆ ಚೆಕ್‌ಅನ್ನು ನೀಡಿ ಫಲಾನುಭವಿ ಖಾತೆಗೆ ಜಮಾ ಮಾಡುವುದು.
2) ಫಲಾನುಭವಿಯು ಯಾವುದಾದರು ಬ್ಯಾಂಕ್‌ನಿಂದ ಸಾಲ ಪಡೆದಿದಲ್ಲಿ ಸಹಾಯಧನ ಮೊತ್ತವನ್ನು ಸಂಬಂಧಿಸಿದ ಸಾಲದ ಖಾತೆಗೆ ಜಮಾ ಮಾಡುವುದು.

**X.ಆರ್ಥಿಕ ಪ್ರತ್ಯಾಯೋಜನೆ ( Delegation of Power) :**

ಈ ಯೋಜನೆಯಡಿ ಮಾರ್ಗಸೂಚಿಯಂತೆ ಮಂಜೂರು ಮಾಡಲು ರಾಜ್ಯ ಕಾರ್ಯಕಾರಿಣಿ ಸಮಿತಿ ಸಭೆಗೆ ಪ್ರದತ್ತವಾದ ಅಧಿಕಾರವಿದ್ದು ಈ ಅಧಿಕಾರವನ್ನು ಚಲಾಯಿಸಲು ಮಿಷನ್ ನಿರ್ದೇಶಕರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

**XI. Reporting and documentation (ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು).**

1. ಮಾಹೆಯ ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ KSHMA ಕಛೇರಿಗೆ ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ ಸಲ್ಲಿಸುವುದು.

**ವಿ.ಸೂ: ಎಲ್ಲಾ ಅರ್ಜಿಗಳು KSHMA ಕಛೇರಿಗೆ ದಿನಾಂಕ :ಜನವರಿ 2015ರ ಒಳಗಡೆ MPIC ನಂತೆ ಸಲ್ಲಿಸಿ Sanction ಪಡೆಯತಕ್ಕದ್ದು. ನಂತರ NHM ಕಛೇರಿಯಲ್ಲಿ ಸ್ವೀಕೃತಿ ಯಾಗುವ ಪ್ರಸ್ತಾವನೆಗಳನ್ನು ಪರಿಗಣಿಸದೇ ಆಯಾ ತೋಟಗಾರಿಕೆ ಉಪ ನಿರ್ದೇಶಕರ ಜವಾಬ್ದಾರಿಯೊಂದಿಗೆ ಹಿಂದಿರುಗಿಸಲಾಗುವುದು. ಮುಂದಿನ ಪರಿಣಾಮಗಳಿಗೆ ಸಂಬಂಧಪಟ್ಟ ತೋ.ಉ.ನಿ. ರವರು ಹೊಣೆಗಾರರಾಗಿರುತ್ತಾರೆ.**

**ಮಿಷನ್ ನಿರ್ದೇಶಕರು**

**ಹಾಗೂ**

**ತೋಟಗಾರಿಕೆ ನಿರ್ದೇಶಕರು.**

# Annexure-1 (A)

## ಸ್ಥಳ ಪರಿಶೀಲನಾ ದೃಢೀಕರಣ ಪತ್ರ

### ಹಸಿರು ಮನೆ ಘಟಕಕ್ಕೆ ತಾಲ್ಲೂಕು ಅಧಿಕಾರಿಗಳ ಸ್ಥಳ ಪರಿಶೀಲನಾ ದೃಢೀಕರಣ ಪತ್ರ

ದಿನಾಂಕ__________ರಂದು ಶ್ರೀ/ಶ್ರೀಮತಿ ___________________ ತಂದೆ/ಗಂಡ ಶ್ರೀ/ಶ್ರೀಮತಿ ______________________ ವಯಸ್ಸು ____,ಗ್ರಾಮ______________, ತಾಲ್ಲೂಕು ___________ರವರ ಜಮೀನಿನ ಸರ್ವೆ ನಂ: ________ನಿರ್ಮಿಸಿರುವ ಹಸಿರುಮನೆ (Tubular Structure) ಘಟಕಕ್ಕೆ ಭೇಟಿ ನೀಡಿದ್ದು, ಈ ಘಟಕವನ್ನು ಒಟ್ಟು_______ಚ.ಮೀ. ವಿಸ್ತೀರ್ಣದಲ್ಲಿ ನಿರ್ಮಿಸಿದ್ದು, ಇದರ ಉದ್ದ ________ಮೀಟರ್ ಹಾಗೂ ಅಗಲ________ಮೀಟರ್ ಇರುತ್ತದೆ. ಸದರಿ ಘಟಕದಲ್ಲಿ ____________ ತೋಟಗಾರಿಕೆ ಬೆಳೆಯನ್ನು ಬೆಳೆಯಲು ಉದ್ದೇಶಿಸಿರುತ್ತಾರೆ.

- ರೈತರು ಅರ್ಜಿ ನೀಡಿದ ದಿನಾಂಕ :_____________
- ಘಟಕ ಪ್ರಾರಂಭಿಸಲು ಇಲಾಖೆಯಿಂದ ನೀಡಿದ ಅನುಮತಿ ಪತ್ರ ಸಂಖ್ಯೆ & ದಿನಾಂಕ: ___________________
- ರೈತರು ಕಾಮಗಾರಿ ಪ್ರಾರಂಭಿಸಿದ ದಿನಾಂಕ :______________
- Frame work ಮುಗಿಸಿದ/ ಘಟಕ ಪೂರ್ಣಗೊಂಡ ದಿನಾಂಕ: ______________
- **ಘಟಕದ ಒಟ್ಟು ವಿಸ್ತೀರ್ಣ: ______________ ಮತ್ತು ಘಟಕಗಳ ಸಂಖ್ಯೆ: ______________**

| TECHNICAL SPECIFICATIONS FOR NATURALLY VENTELATED - GREEN HOUSES (TUBULAR) | | | | |
|---|---|---|---|---|
| Sl.No | Material Description (GI "B" class) | Dimension Specifications as per guidelines | ಬಳಸಿರುವ Dimension (mm/inch) | Total quantity used |
| 1 | Coloumns | 75 mm | | |
| 2 | Top Purlins | 32mm | | |
| 3 | Gutter Purlins | 32mm | | |
| 4 | Top Arches of Truss | 40mm | | |
| 5 | Bottom Chord of Truss | 50mm | | |
| 6 | Internal Truss with Bracing | 25mm | | |
| 7 | Corridor /Balconies | 50mm | | |
| 8 | Curtain Runners | 32mm | | |
| 9 | Flap Control Pipe (Cranking Handle) | 25mm | | |
| 10 | Curtain shaft | 25mm | | |
| 11 | Cross Bracing | 32mm | | |
| 12 | Gutter GI Sheet -18 Gauges | 2mm thick | | |
| 13 | Aluminum Profile | ಹೌದು | | |
| 14 | Powder Coated /Plastic Insulated Springs | ಹೌದು | | |
| 15 | UV Stabilized LDPE Film (Top) | 200micron (0.2mm) | | |
| 16 | Insect Proof net | 40s or 60s Mesh | | |
| 16A) | UV Stabilized LDPE Film (Ground level up to side | 200M(0.5to1.0m) | | |

| | | | | |
|---|---|---|---|---|
| | ventilation ) | | | |
| 17 | Top Ventilation should & Must Face -East or North East | ಹೌದು | | |
| 18 | Gutter should have Gradient /Slope of 1 to 2% | ಹೌದು | | |
| 19 | Provide Roof Top Rain Water Harvesting Pipe | ಹೌದು | | |
| 20 | Double Door System with Cubicle Should be Provided for Entrance | ಹೌದು | | |
| 21 | Drip/sprinkler irrigation System with fertigation system | ಹೌದು | | |

*** ಯಾವ ಯಾವ Dimension ನ ಮತ್ತು length GI Pipes ಗಳು ಬಳಸಿರುವ ಬಗ್ಗೆ ಮೇಲೆ ಸ್ಪಷ್ಟ ಮಾಹಿತಿ ನೀಡುವುದು.**

**ಇಲಾಖೆಯು ತಾಂತ್ರಿಕವಾಗಿ ಸೂಚಿಸಿರುವಂತೆ ಗುಣಮಟ್ಟದ ವಸ್ತುಗಳನ್ನು ಉಪಯೋಗಿಸಿ ಮಾರ್ಗಸೂಚಿ ಪ್ರಕಾರ ಘಟಕವನ್ನು ನಿರ್ಮಿಸಿರುತ್ತಾರೆ ಎಂದು ದೃಢೀಕರಿಸಿದೆ.**

| | |
|---|---|
| **ಸಹಿ :-** | **ಸಹಿ:-** |
| **ಹೆಸರು :-. ....................** | **ಹೆಸರು :-. . ....................** |
| **ಸ.ತೋ.ಅ. ------------** | **ಹಿ./ಸ.ತೋ.ನಿ ( ಜಿ.ಪಂ)** |
| **ರೈತ ಸಂಪರ್ಕ ಕೇಂದ್ರ** | **------------------ ತಾಲ್ಲೂಕು** |

# <u>ಅನುಬಂಧ-1 (B)</u>

## <u>ಸ್ಥಳ ಪರಿಶೀಲನಾ ದೃಢೀಕರಣ</u> -<u>ನಮೂನೆ</u>

### <u>ನೆರಳು ಪರದೆ ಘಟಕಕ್ಕೆ ತಾಲ್ಲೂಕು ಅಧಿಕಾರಿಗಳ ಸ್ಥಳ ಪರಿಶೀಲನಾ ದೃಢೀಕರಣ ಪತ್ರ</u>

ದಿನಾಂಕ________ರಂದು ಶ್ರೀ/ಶ್ರೀಮತಿ ___________________ ತಂದೆ/ಗಂಡ ಶ್ರೀ/ಶ್ರೀಮತಿ _____________________ ವಯಸ್ಸು _____, ಗ್ರಾಮ_________, ತಾಲ್ಲೂಕು ___________ರವರ ಜಮೀನಿನ ಸರ್ವೆ ನಂ: ________ನಿರ್ಮಿಸಿರುವ ನೆರಳು ಪರದೆ (Tubular Structure) ಘಟಕಕ್ಕೆ ಭೇಟಿ ನೀಡಿದ್ದು, ಈ ಘಟಕವನ್ನು ಒಟ್ಟು_______ಚ.ಮೀ. ವಿಸ್ತೀರ್ಣದಲ್ಲಿ ನಿರ್ಮಿಸಿದ್ದು, ಇದರ ಉದ್ದ ________ಮೀಟರ್ ಹಾಗೂ ಅಗಲ________ಮೀಟರ್ ಇರುತ್ತದೆ. ಸದರಿ ಘಟಕದಲ್ಲಿ ____________ ತೋಟಗಾರಿಕೆ ಬೆಳೆಯನ್ನು ಬೆಳೆಯಲು ಉದ್ದೇಶಿಸಿರುತ್ತಾರೆ. ಘಟಕವು ತಾಂತ್ರಿಕವಾಗಿ ಮಾರ್ಗಸೂಚಿಯ ಪ್ರಕಾರ ನಿರ್ಮಿಸಿದ್ದು ಇಲಾಖೆಯು ತಾಂತ್ರಿಕವಾಗಿ ಸೂಚಿಸಿರುವಂತೆ ವಿವಿಧ ವಸ್ತುಗಳನ್ನು ಅವುಗಳ ಗುಣಮಟ್ಟದಂತೆ ಬಳಸಲಾಗಿದೆ.

- ❖ ರೈತರು ಅರ್ಜಿ ನೀಡಿದ ದಿನಾಂಕ :_____________
- ❖ ಘಟಕ ಪ್ರಾರಂಭಿಸಲು ಇಲಾಖೆಯಿಂದ ನೀಡಿದ ಅನುಮತಿ ಪತ್ರ ಸಂಖ್ಯೆ & ದಿನಾಂಕ: __________________
- ❖ ರೈತರು ಕಾಮಗಾರಿ ಪ್ರಾರಂಭಿಸಿದ ದಿನಾಂಕ :______________
- ❖ Frame work ಮುಗಿಸಿದ/ ಘಟಕ ಪೂರ್ಣಗೊಂಡ ದಿನಾಂಕ: ______________
- ❖ **ಘಟಕದ ಒಟ್ಟು ವಿಸ್ತೀರ್ಣ: _______________ ಮತ್ತು ಘಟಕಗಳ ಸಂಖ್ಯೆ: _______________**

| TECHNICAL SPECIFICATIONS FOR - SHADE NET HOUSES (TUBULAR) | | | | |
|---|---|---|---|---|
| Sl.No. | Material Description (GI "B" class) | Dimension Specifications as per guidelines | ಬಳಸಿರುವ Dimension (mm/inch) | Total quantity used |
| 1 | Foundation Pipe | 60mm | | |
| 2 | Coloumns | 50mm | | |
| 3 | Purlins | 40mm | | |
| 4 | GI wire | 10 to 12 Guage | | |
| 5 | Shade net (%) | 50 or 70% | | |

*** ಯಾವ ಯಾವ Dimension ನ ಮತ್ತು length GI Pipes ಗಳು ಬಳಸಿರುವ ಬಗ್ಗೆ ಮೇಲೆ ಸ್ಪಷ್ಟ ಮಾಹಿತಿ ನೀಡುವುದು.**

**ಇಲಾಖೆಯು ತಾಂತ್ರಿಕವಾಗಿ ಸೂಚಿಸಿರುವಂತೆ ಗುಣಮಟ್ಟದ ವಸ್ತುಗಳನ್ನು ಉಪಯೋಗಿಸಿ ಮಾರ್ಗಸೂಚಿ ಪ್ರಕಾರ ಘಟಕವನ್ನು ನಿರ್ಮಿಸಿರುತ್ತಾರೆ ಎಂದು ದೃಢೀಕರಿಸಿದೆ.**

**ಸಹಿ :**
**ಹೆಸರು :. ....................**
**ಸ.ತೋ.ಅ. ------------**
**ರೈತ ಸಂಪರ್ಕ ಕೇಂದ್ರ**

**ಸಹಿ:**
**ಹೆಸರು :. . ...................**
**ಹಿ./ಸ.ತೋ.ನಿ ( ಜಿ.ಪಂ)**
**----------------- ತಾಲ್ಲೂಕು**

## ಪ್ರತಿಯೊಂದು ಅರ್ಜಿಯ ಜೊತೆಯಲ್ಲಿ ನೀಡಬೇಕಾದ-Check List

### ಹಸಿರು ಮನೆ/ ನೆರಳು ಪರದೆ ಪರಿಶೀಲನಾ ಪಟ್ಟಿ( ಚೆಕ್ ಲಿಸ್ಟ್)

| | | |
|---|---|---|
| 1 | ಫಲಾನುಭವಿಯು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆಯೇ ? | ಹೌದು/ಇಲ್ಲ |
| 2 | ಫಲಾನುಭವಿಯ ಹೆಸರಿನಲ್ಲಿರುವ ಪ್ರಸಕ್ತ ಸಾಲಿನ ಪಹಣಿ ಲಗತ್ತಿಸಿರುವರೇ? | ಹೌದು/ಇಲ್ಲ |
| 3 | ಫಲಾನುಭವಿಯು ಜಂಟಿ ಖಾತೆ ಹೊಂದಿದಲ್ಲಿ ಕುಟುಂಬದವರ ಒಪ್ಪಿಗೆ ಪತ್ರ / ಇತರೆ ಖಾತೆದಾರರು NOC ನೀಡಿರುವರೇ? | ಹೌದು/ಇಲ್ಲ |
| 4 | Detailed Project estimate ಲಗತ್ತಿಸಿದ್ದಾರೆಯೇ ? | ಹೌದು/ಇಲ್ಲ |
| 5 | ಸ್ಥಳ ಪರಿಶೀಲನಾ ದೃಡೀಕರಣ ಪತ್ರ (Annexure -1A/1B) ಲಗತ್ತಿಸಿರುತ್ತಾರೆಯೇ? | ಹೌದು/ಇಲ್ಲ |
| 6 | ಘಟಕದ ನಿರ್ಮಾಣಕ್ಕೆ ತಗಲಿರುವ ಒಟ್ಟು ವೆಚ್ಚದ ನಗದು/ಸಾಲದ ಬಿಲ್ಲುಗಳು (TIN ಹೊಂದಿರುವ) ನೀಡಿರುವರೇ ? | ಹೌದು/ಇಲ್ಲ |
| 7 | ಘಟಕ ಸದುಪಯೋಗಪಡಿಸಿಕೊಳ್ಳುವ ಬಗ್ಗೆ ಪ್ರಮಾಣ ಪತ್ರ / ಮುಚ್ಚಳಿಕೆ ಪತ್ರ ಲಗತ್ತಿಸಿರುತ್ತಾರೆಯೇ ? | ಹೌದು/ಇಲ್ಲ |
| 8 | ಮಣ್ಣು ಮತ್ತು ನೀರು ಪರೀಕ್ಷಾ ವರದಿ ನೀಡಿರುವರೇ? | ಹೌದು/ಇಲ್ಲ |
| 9 | ಛಾಯಾಚಿತ್ರ-3ಹಂತಗಳ ಘಟಕ ನಿರ್ಮಾಣದ ಛಾಯಾಚಿತ್ರ ಲಗತ್ತಿಸಿರುವರೇ? | ಹೌದು/ಇಲ್ಲ |
| 10 | ಘಟಕ ನಿರ್ಮಾಣಕ್ಕೆ ಇಲಾಖೆಯಿಂದ ನೀಡಿರುವ ಅನುಮತಿ ಪತ್ರ ಲಗತ್ತಿಸಿರುವರೇ? | ಹೌದು/ಇಲ್ಲ |
| 11 | ತೋ.ಉ .ನಿ. ಹಾಗೂ ತಾಲ್ಲೂಕು ಅಧಿಕಾರಿಗಳು ಸಹಾಯಧನಕ್ಕೆ ಶಿಫಾರಸ್ಸು (ಸಹಾಯಧನದ ಮೊತ್ತ) ಮಾಡಿರುವ ಪತ್ರ ನೀಡಿರುವರೇ? | ಹೌದು/ಇಲ್ಲ |
| 12 | ಫಲಾನುಭವಿಯು ಈ ಘಟಕದ ನಿರ್ಮಾಣಕ್ಕಾಗಿ ಬ್ಯಾಂಕಿನಿಂದ ಸಾಲ ಪಡೆದಿದ್ದಲ್ಲಿ ಸಾಲ ಮಂಜೂರಾತಿ ಪತ್ರ, ಲಗತ್ತಿಸಿರುವರೇ?(ಅನ್ವಯಿಸಿದಲ್ಲಿ) | ಹೌದು/ಇಲ್ಲ |
| 13 | ಸದರಿ ಘಟಕಕ್ಕೆ ಯಾವುದೇ ಯೋಜನೆ/ಇಲಾಖೆಯಿಂದ ಸಹಾಯಧನ ಪಡೆದಿಲ್ಲವೆಂದು ತಾಲ್ಲೂಕು ಅಧಿಕಾರಿಗಳ ದೃಡೀಕರಣ ಪತ್ರ ಲಗತ್ತಿಸಿರುವರೇ? | ಹೌದು/ಇಲ್ಲ |
| 14 | ಸದರಿ ಫಲಾನುಭವಿಯು ಈಗಾಗಲೇ ಹೊಂದಿರುವ ಹಸಿರು ಮನೆ/ ನೆರಳು ಪರದೆ ವಿಸ್ತೀರ್ಣ ಮತ್ತು ನಿರ್ಮಿಸಿರುವ ವರ್ಷ ಹಾಗೂ ಈ ಘಟಕಕ್ಕೆ ಯಾವುದಾದರೂ ಯೋಜನೆ/ ಇಲಾಖೆಯಲ್ಲಿ ಸಹಾಯಧನ/ ಸಾಲ ಪಡೆದಿರುವ ಬಗ್ಗೆ ಮಾಹಿತಿ ಪ್ರಸ್ತಾವನೆಯಲ್ಲಿ ನೀಡಿರುವರೇ? | ಹೌದು/ಇಲ್ಲ |
| 15 | ಮೇಲಿನ ಎಲ್ಲಾ ಅಗತ್ಯ ನಕಲು ದಾಖಲಾತಿಗಳಿಗೆ ಅನುಷ್ಠಾನಾಧಿಕಾರಿಗಳು ದೃಡೀಕರಿಸಿರುವರೇ? | ಹೌದು/ಇಲ್ಲ |

ದಿನಾಂಕ: ____________

ಸಹಿ:

ಹೆಸರು: ____________

ಹಿ.ಸ.ತೋ.ನಿ./ಸ.ತೋ.ನಿ:

ತಾಲ್ಲೂಕು____________